# ಸತ್ಯಶೋಧನೆಯ ಪಥ

ಸ್ವಾಮಿ ಅಘಹರಾನಂದ



ಭಾರತೀಯ ಆಧ್ಯಾತ್ಮಿಕ ಪರಂಪರೆ ವೈಜ್ಞಾನಿಕ ದೃಷ್ಟಿಕೋನವನ್ನು ಅಳವಡಿಸಿಕೊಂಡಿದೆ; ಹಿಂದೂ ಆಧ್ಯಾತ್ಮಿಕತೆಯನ್ನು ವೈಜ್ಞಾನಿಕವಾಗಿ ಕೂಡ ವಿಶ್ಲೇಷಿಸಬಹುದು ಎಂದು ತೋರಿಸಿಕೊಟ್ಟವರು ಸ್ವಾಮಿ ವಿವೇಕಾನಂದರು. ಆಧುನಿಕ ಜಗತ್ತಿಗೆ ಹಾಗೂ ಇಂದಿನ ಯುವ ಜನತೆಗೆ ಅಗತ್ಯವಾದ ಹಳೆಯ - ಹೊಸ ಸಮನ್ವಯ ಸಿದ್ಧಾಂತದ ಹಿನ್ನೆಲೆಯಲ್ಲಿ ವಿಜ್ಞಾನ ಮತ್ತು ಧರ್ಮ-ಅಧ್ಯಾತ್ಮಗಳ ದೃಷ್ಟಿಕೋನಗಳನ್ನು ಇಲ್ಲಿ ವಿಶ್ಲೇಷಿಸಲಾಗಿದೆ. ಲೇಖಕರು ಮೈಸೂರು ಶ್ರೀರಾಮಕೃಷ್ಣ ವಿದ್ಯಾಶಾಲೆಯಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ.

### ಜ್ಞಾನದ ಆವಶ್ಯಕತೆ

ಈ ಬ್ರಹ್ಮಾಂಡದಲ್ಲಿ ಅನೇಕ ಪ್ರಭೇದದ ಜೀವಜಂತುಗಳಿವೆ, ಪಶು-ಪಕ್ಷಿ-ಪ್ರಾಣಿ-ಕೀಟಗಳಿವೆ. ಇವುಗಳೆಲ್ಲದರ ಜೊತೆಗೆ ಮನುಷ್ಯನೂ ಇದ್ದಾನೆ. ಮನುಷ್ಯನ ಹೊರತಾಗಿ ಪ್ರತಿಯೊಂದು ಜೀವಿಯೂ ಒಂದೋ ಸುತ್ತ-ಮುತ್ತಲಿನ ಪ್ರಕೃತಿಗೆ ಹೊಂದಿಕೊಂಡು ಬದುಕುತ್ತಿವೆ, ಇಲ್ಲವೇ ಪ್ರಕೃತಿಗೆ ಶರಣಾಗಿ ಬದುಕುತ್ತಿವೆ. ಮನುಷ್ಯನು ಮಾತ್ರ ಪ್ರಕೃತಿಯು ಹಾಕಿದ ಅಥವಾ ಪ್ರಕೃತಿಯು ಮುಂದೊಡ್ಡುತ್ತಿರುವ ಎಲ್ಲ ನಿರ್ಬಂಧಗಳನ್ನು ಮೀರಿ ಬದುಕುತ್ತಿದ್ದಾನೆ. ಇದಕ್ಕೆ ಪ್ರಮುಖ ಕಾರಣವೇನೆಂದರೆ ಮನುಷ್ಯನಲ್ಲಿ ಜ್ಞಾನವಿದೆ. ಈ ಜ್ಞಾನದ ಕಾರಣದಿಂದಾಗಿ ಆದಿಮಾನವನಾಗಿದ್ದಾಗ ಪ್ರಾಣಿಗಳಂತೆ ಬಾಳುತ್ತಿದ್ದ ಮನುಷ್ಯ ಇಂದು ಊಹಿಸಲೂ ಆಗದ ಕಾರ್ಯಗಳನ್ನು ಲೀಲಾಜಾಲವಾಗಿ ಸಾಧಿಸುತ್ತಿದ್ದಾನೆ. ಈ ಜ್ಞಾನದ ಪರಿಮಾಣವೇ ಒಬ್ಬ ಮನುಷ್ಯನಿಗಿಂತ ಇನ್ನೊಬ್ಬ ಮನುಷ್ಯನಿಗೆ ಇರುವ ವ್ಯತ್ಯಾಸವನ್ನು ಉಂಟುಮಾಡುತ್ತದೆ.

ನಮ್ಮ ಸುತ್ತ-ಮುತ್ತಲಿನ, ಒಳ-ಹೊರಗಿನ ಪ್ರಕೃತಿಯ ಕುರಿತಾದ ಸರಿಯಾದ, ಸಮರ್ಪಕವಾದ ತಿಳುವಳಿಕೆಯನ್ನೇ ಜ್ಞಾನವೆನ್ನುತ್ತಾರೆ. ಹೆಚ್ಚು ಹೆಚ್ಚು ಸರಿಯಾದ ಜ್ಞಾನದಿಂದ ಮಾನವನ ವಿಕಾಸ ಇನ್ನಷ್ಟು ಮತ್ತಷ್ಟು ಸಮೃದ್ಧವಾಗುತ್ತದೆ. ಉದಾಹರಣೆಗೆ ಸೂರ್ಯನು ಭೂಮಿಯ ಸುತ್ತ ಸುತ್ತುತ್ತಾನೆ ಎಂಬ ಜ್ಞಾನವಿತ್ತು. ಆದರೆ ವಿಜ್ಞಾನದ ಆವಿಷ್ಕಾರದಿಂದಾಗಿ ಭೂಮಿಯೇ ಸೂರ್ಯನ ಸುತ್ತ ಸುತ್ತುತ್ತಿದೆ, ಮಾತ್ರವಲ್ಲದೆ ಭೂಮಿಯು ತನ್ನ ಸುತ್ತ ತಾನೇ ತಿರುಗುತ್ತಿದೆ ಎಂಬ ಜ್ಞಾನವುಂಟಾಯಿತು. ಈ ಜ್ಞಾನವು ವೈಜ್ಞಾನಿಕ ಕ್ಷೇತ್ರದಲ್ಲಿ ಮಹತ್ತ್ವದ ಕ್ರಾಂತಿಯನ್ನೇ ಉಂಟುಮಾಡಿತು.

ಸ್ವಾಮಿ ವಿವೇಕಾನಂದರು ಹೇಳುತ್ತಾರೆ, ಮಾನವನು ಅಸತ್ಯದಿಂದ ಸತ್ಯದೆಡೆಗೆ ಸಾಗುತ್ತಿಲ್ಲ. ಬದಲಾಗಿ ಕೆಳಸ್ತರದ ಸತ್ಯದಿಂದ ಮೇಲಿನ ಸ್ತರದ ಸತ್ಯದೆಡೆಗೆ ಸಾಗುತ್ತಿದ್ದಾನೆ ಎಂದು. ಭೂಮಿಯೇ ಕೇಂದ್ರಬಿಂದುವಾಗಿತ್ತು ಎಂಬುದು ಕೆಳಸ್ತರದ ಸತ್ಯ. ಆದರೆ ಜ್ಞಾನವನ್ನು ಪಡೆಯುವ, ಸತ್ಯವನ್ನು ತಿಳಿಯುವ ಸಾಧನಗಳು, ಪಥಗಳು ಸಮರ್ಪಕವಾಗುತ್ತ ಹೋದಂತೆ ಸೂರ್ಯನೇ ನಿಜವಾದ ಕೇಂದ್ರಬಿಂದು ಎಂಬ ಮೇಲಿನ ಸ್ತರದ ಸತ್ಯದ ಆವಿಷ್ಕಾರವಾಯಿತು. ಜ್ಞಾನವು ನಿಖರವಾದಷ್ಟೂ, ಸತ್ಯಕ್ಕೆ ನಿಕಟವಾದಷ್ಟೂ ಮಾನವನ ಔನ್ನತ್ಯ ಉಂಟಾಗುತ್ತದೆ. ಹಾಗಾದರೆ ಸತ್ಯಕ್ಕೆ ಸಮೀಪವಾದ, ಸರಿಯಾದ ಜ್ಞಾನವನ್ನು ಪಡೆಯುವ ದಾರಿ ಯಾವುದು ಎಂಬುದೇ ನಮ್ಮ ಮುಂದಿರುವ ಪ್ರಶ್ನೆ.

### ವಿಜ್ಞಾನದ ಪ್ರಕಾರ ಸತ್ಯಶೋಧನೆ

ವಿಜ್ಞಾನವು ಸತ್ಯವನ್ನು ಅರಿಯಲು ಬಳಸುವ ಪ್ರಮುಖ ಮಾರ್ಗವೆಂದರೆ Empiricism (ಪ್ರಾಯೋಗಿಕ, ಅನುಭವ

ಆಧಾರಿತ) ಮತ್ತು Rationalism (ವೈಚಾರಿಕತೆ, ತಾರ್ಕಿಕತೆ). ವಿಜ್ಞಾನವು ಜ್ಞಾನವನ್ನು, ಸತ್ಯವನ್ನು ಇಂದ್ರಿಯ ಅನುಭವದ ಆಧಾರದ ಮೂಲಕ ಪಡೆಯಲು ಅಥವಾ ಅರಿಯಲು ಪ್ರಯತ್ನಿಸುತ್ತದೆ. ಸತ್ಯವು ಇಂದ್ರಿಯಗ್ರಾಹ್ಯವಾಗಿರಬೇಕು. ಎಂದರೆ ನಾವದನ್ನು ನೋಡುವಂತಿರಬೇಕು, ಕೇಳುವಂತಿರಬೇಕು, ಮೂಸುವಂತಿರಬೇಕು, ಸವಿಯುವಂತಿರಬೇಕು, ಸ್ಪರ್ಶಿಸುವಂತಿರಬೇಕು. ಆ ಸತ್ಯದಿಂದ ಉಂಟಾಗುವ ಅನುಭವಗಳನ್ನು ದಾಖಲೆ ಮಾಡಿಕೊಳ್ಳುವಂತಿರಬೇಕು. ಅದು ನಮ್ಮ ಗಮನಕ್ಕೆ ಬರುವಂತಿರಬೇಕು ಅಥವಾ ಅಳತೆಗೆ (measurement) ಒಳಪಡುವಂತಿರಬೇಕು. ಇದು ಪ್ರತ್ಯಕ್ಷವಾಗಿ ಆಗಿರಬಹುದು ಅಥವಾ ಪರೋಕ್ಷವಾಗಿ ಆಗಿರಬಹುದು.

ಉದಾಹರಣೆಗೆ, ಪರಮಾಣುಗಳನ್ನು ಯಾರೂ ಕಣ್ಣಿನಿಂದ ನೋಡಲಿಲ್ಲ. ಆದರೆ ಫೋಟೋಗ್ರಾಫಿಕ್ ಪ್ಲೇಟ್‌ನ ಮೇಲೆ ಪರಮಾಣುಗಳು ಬಿಟ್ಟ ಗುರುತುಗಳಿಂದ ಅದರ ಚಲನೆಯನ್ನು ಅಳೆಯಬಹುದಾಗಿದೆ ಅಥವಾ ಗಮನಿಸಬಹುದಾಗಿದೆ. ಯಾರೊಬ್ಬರೂ ಗುರುತ್ವಾಕರ್ಷಣೆಯನ್ನು ನೋಡಲಿಲ್ಲ. ಆದರೆ ಅದರ ಪರಿಣಾಮವನ್ನು ಗಮನಿಸಬಹುದಾಗಿದೆ ಹಾಗೂ ಅಳೆಯಬಹುದಾಗಿದೆ.

ಇನ್ನು ಕೆಲವಾರು ಊಹೆಗಳನ್ನು ಮಾಡುತ್ತೇವೆ. ಅದರ ಮೇಲೆ ತರ್ಕವನ್ನು ವೈಚಾರಿಕತೆಯನ್ನು ಅನ್ವಯಿಸುತ್ತ ಹೋಗುತ್ತೇವೆ. ತರ್ಕಕ್ಕೆ ಸೂಕ್ತವಾದದ್ದನ್ನು ಸ್ವೀಕರಿಸುತ್ತೇವೆ. ವಿರುದ್ಧವಾದದ್ದನ್ನು ನಿರಾಕರಿಸುತ್ತೇವೆ. ಪ್ರಯೋಗಗಳ ಮೂಲಕ ತರ್ಕಕ್ಕೆ ಸೂಕ್ತವಾದದ್ದನ್ನು ಸಾಬೀತುಪಡಿಸಲು ಪ್ರಯತ್ನಿಸುತ್ತೇವೆ. ಇದು ವಿಜ್ಞಾನವು ಸತ್ಯವನ್ನು ಅರಿಯಲು ಬಳಸುವ ಮಾರ್ಗ.

### ವೇದಾಂತದ ಪ್ರಕಾರ ಸತ್ಯಶೋಧನೆ

ಭಾರತೀಯ ತತ್ತ್ವಜ್ಞಾನಿಗಳು ಸತ್ಯಶೋಧನೆಗಾಗಿ ಹಲವಾರು ಪ್ರಯತ್ನಗಳನ್ನು ಮಾಡಿದ್ದಾರೆ. ತಾವು ಕಂಡುಕೊಂಡ ಸತ್ಯವನ್ನು ಅವರುಗಳು 'ದರ್ಶನ' ಎಂದು ಕರೆದರು. ವೇದವನ್ನು ಪ್ರಮಾಣವಾಗಿ ಅಂಗೀಕರಿಸಿದ ಆಸ್ತಿಕ ದರ್ಶನಗಳು ಆರು. ಹಾಗೆಯೇ, ವೇದವನ್ನು ಪ್ರಮಾಣವಾಗಿ ಪರಿಗಣಿಸದ ನಾಸ್ತಿಕ ದರ್ಶನಗಳು ಆರು. ಈ ಎಲ್ಲ ದರ್ಶನದ ಪ್ರವರ್ತಕರು ತಮ್ಮ ತಮ್ಮ ನಿಲುವನ್ನು ಮಂಡಿಸಿದ್ದಾರೆ. ಶರೀರವೇ ಸತ್ಯ, ಶರೀರದ ಸುಖವೇ ಮುಕ್ತಿ, ಅದೇ ಜೀವನದ ಉದ್ದೇಶ ಎಂದು ಬಗೆದ ಚಾರ್ವಾಕ ದರ್ಶನದಿಂದ ಹಿಡಿದು ಸರ್ವವೂ ಸತ್ ಚಿತ್ ಆನಂದ ಸ್ವರೂಪದ ಬ್ರಹ್ಮವೇ ಆಗಿದೆ ಎಂಬ ವೇದಾಂತ ದರ್ಶನದವರೆಗೆ ಇವುಗಳ ವ್ಯಾಪ್ತಿಯಿದೆ. ಈ ಎಲ್ಲ ದರ್ಶನದ ಪ್ರವರ್ತಕರಿಗೂ ನಮ್ಮಲ್ಲಿ ಮಾನ್ಯತೆ ನೀಡಲಾಗಿತ್ತು. ಪ್ರತಿಯೊಂದು ದರ್ಶನಕ್ಕೂ ಅಸಂಖ್ಯಾತ ಅನುಯಾಯಿಗಳಿದ್ದರು ಹಾಗೂ ಅವುಗಳು ಪ್ರಸ್ತುತಪಡಿಸುವ ಸಿದ್ಧಾಂತಗಳನ್ನು ಅಧ್ಯಯನ ಮಾಡುತ್ತಿದ್ದರು ಎಂಬುದನ್ನು ಗಮನಿಸಿದರೆ, ಭಾರತದಲ್ಲಿದ್ದ ಜ್ಞಾನದಾಹವನ್ನು ನಾವು ಗುರುತಿಸಬಹುದಾಗಿದೆ.

ವೇದಾಂತ ದರ್ಶನವು ಸತ್ಯವನ್ನು ಗುರುತಿಸಲು ಆರು ಪ್ರಮಾಣಗಳನ್ನು ಸ್ವೀಕರಿಸುತ್ತದೆ. ಪ್ರತ್ಯಕ್ಷ, ಅನುಮಾನ, ಉಪಮಾನ, ಅರ್ಥಾಪತ್ತಿ, ಅನುಪಲಬ್ಧಿ ಹಾಗೂ ಶಾಸ್ತ್ರ ಪ್ರಮಾಣ. ಪ್ರತ್ಯಕ್ಷವು ಇಂದ್ರಿಯಗ್ರಾಹ್ಯವಾದದ್ದನ್ನು ಸ್ವೀಕರಿಸುತ್ತದೆ. ಅನುಮಾನ, ಉಪಮಾನ, ಅರ್ಥಾಪತ್ತಿ ಹಾಗೂ ಅನುಪಲಬ್ಧಿ – ಈ ನಾಲ್ಕು ಪ್ರಮಾಣಗಳು ತರ್ಕವನ್ನು ವಿಶೇಷವಾಗಿ ಅನುಸರಿಸುತ್ತದೆ. ಹೀಗಾಗಿ ಮೊದಲಿನ ಐದು ಪ್ರಮಾಣಗಳು ಭಾಗಶಃ ವಿಜ್ಞಾನದ ಶೈಲಿಯನ್ನೇ ಅನುಸರಿಸುತ್ತವೆ. ಕೊನೆಯದಾದ ಶಾಸ್ತ್ರ ಪ್ರಮಾಣದ ಬಗ್ಗೆ ತಿಳಿಯೋಣ.

ಶಾಸ್ತ್ರವು ಅತೀಂದ್ರಿಯ ಜ್ಞಾನದ, ಸತ್ಯದ ಕುರಿತಾಗಿ ತಿಳಿಸುತ್ತದೆ. ಆದರೆ ಶಾಸ್ತ್ರಪ್ರಮಾಣವು ಇಂದ್ರಿಯಗ್ರಾಹ್ಯವಾದ ಜ್ಞಾನವನ್ನಾಗಲಿ, ಸತ್ಯವನ್ನಾಗಲಿ ನಿರಾಕರಿಸುವುದಿಲ್ಲ. ಶ್ರೀಶಂಕರಾಚಾರ್ಯರು ತಮ್ಮ ಗೀತಾಭಾಷ್ಯದಲ್ಲಿ ಹೀಗೆ ಬರೆಯುತ್ತಾರೆ : ''ಬೆಂಕಿಯು ತಣ್ಣಗಿರುವುದೆಂದಾಗಲಿ, ಬೆಳಗುವುದಿಲ್ಲವೆಂದಾಗಲಿ ಎಂದು ನೂರು ಶ್ರುತಿಗಳು ಹೇಳಿದರೂ ಅದು ಪ್ರಮಾಣವಾಗಲಾರದು.'' ಪ್ರತ್ಯಕ್ಷವೇ ಮುಂತಾದ ಪ್ರಮಾಣಗಳಿಗೆ ತೋರದ ಅತೀಂದ್ರಿಯ ಸತ್ಯವನ್ನು ತಿಳಿಸುವುದಕ್ಕೆ ನಾವು ಶ್ರುತಿ ಪ್ರಮಾಣವನ್ನು ಸ್ವೀಕರಿಸಬಹುದಾಗಿದೆ.

ಹಾಗೆಂದು ಶ್ರುತಿಪ್ರಮಾಣವು ಮಂಡಿಸುವ ಸತ್ಯವು ಅನುಭವಕ್ಕೆ ಬಾರದು ಎಂದೇನಿಲ್ಲ. ಶಾಸ್ತ್ರಗಳಲ್ಲಿ ಹೇಳಿದ ಸಾಧನೆಯ ಮಾರ್ಗವನ್ನು ಅನುಸರಿಸಿ, ಮನಸ್ಸನ್ನು ಉನ್ನತ ಸ್ತರಕ್ಕೆ ಏರಿಸಲು ಸಾಧ್ಯವಾದರೆ ಸತ್ಯದ ಸಮ್ಯಕ್‌ದರ್ಶನವುಂಟಾಗುತ್ತದೆ. ಈ ಸತ್ಯದರ್ಶನದಿಂದ ಉಂಟಾಗುವ ಪರಿಣಾಮವು ವಿಜ್ಞಾನದಿಂದ ದೊರೆಯುವ ಸತ್ಯದರ್ಶನಕ್ಕಿಂತ ಭಿನ್ನವಾದದ್ದಾಗಿರುತ್ತದೆ.

### ವಿಜ್ಞಾನದ ವೈಚಾರಿಕತೆ ಹಾಗೂ ಆಧ್ಯಾತ್ಮಿಕತೆಗೆ ಇರುವ ವ್ಯತ್ಯಾಸ

ಆತ್ಮವನ್ನು ಕುರಿತಾದ ತತ್ತ್ವಶಾಸ್ತ್ರದ ಅಧ್ಯಯನ ಮಾಡಿದ ಮಾತ್ರಕ್ಕೆ ಆತ್ಮತತ್ತ್ವವನ್ನು ಅರಿತಂತಾಗುವುದಿಲ್ಲ. ಆತ್ಮವನ್ನು ಕುರಿತಾದ ಪರಿಕಲ್ಪನೆ ಮಾಡಿದ ಮಾತ್ರಕ್ಕೆ ಆತ್ಮದ ಅನುಭವವಾದಂತೆ ಅಲ್ಲ. ವಿಜ್ಞಾನದ ವೈಚಾರಿಕತೆಯಿಂದ ವಸ್ತುವಿನ ಪರಿಕಲ್ಪನೆ ದೊರೆತೀತೇ ಹೊರತು ವಸ್ತುವಿನ ಅನುಭೂತಿಯಾಗುವುದಿಲ್ಲ. ಈ ವ್ಯತ್ಯಾಸವನ್ನು ನಾವು ಸರಿಯಾಗಿ ತಿಳಿದುಕೊಳ್ಳಬೇಕು.

ವಿಜ್ಞಾನದಿಂದಾಗಿ ವಸ್ತುವಿನ ಅಥವಾ ಸಂಗತಿಯ ಕುರಿತಾದ ಜ್ಞಾನವನ್ನು ಕ್ರಮಬದ್ಧವಾಗಿ ವ್ಯವಸ್ಥಿತಗೊಳಿಸಬಹುದೇ ಹೊರತು, ಆ ವಸ್ತು ಅಥವಾ ಸಂಗತಿಯ ಅನುಭೂತಿ ಪಡೆಯಲಾಗದು. ಶ್ರೀ ಜಗದೀಶ ಚಂದ್ರ ಬೋಸರು ತಮ್ಮ ವಿಜ್ಞಾನದ ಪ್ರಯೋಗದಿಂದ ಸಸ್ಯಗಳಲ್ಲಿ ಜೀವವಿದೆ ಎಂದು ನಮ್ಮ ಬುದ್ಧಿಗೆ ಮನವರಿಕೆಯಾಗುವಂತೆ ಮಾಡಿದರು. ಆದರೆ ಆ ಜೀವವನ್ನು ಪರಿಭಾವಿಸುವ ಅಂತರ್ದೃಷ್ಟಿ ನೀಡುವ ಶಕ್ತಿ ವಿಜ್ಞಾನದ ವ್ಯಾಪ್ತಿಯಲ್ಲಿ ಬರುವುದಿಲ್ಲ. ಆ ಜೀವಂತಿಕೆಯನ್ನು ಪರಿಭಾವಿಸಬೇಕಾದರೆ ನಾವು

ನಮ್ಮ ಮಾನವ ಪ್ರಜ್ಞೆಯನ್ನು ಇನ್ನೂ ಉನ್ನತ ಹಾಗೂ ಸೂಕ್ಷ್ಮ ಸ್ತರಕ್ಕೆ ಏರಿಸಬೇಕಾಗುತ್ತದೆ. ಇದು ಸಾಧ್ಯವಾಗುವುದು ಆಧ್ಯಾತ್ಮಿಕ ಸಾಧನೆಯಿಂದ ಮಾತ್ರವೇ.

ಸಸ್ಯಗಳಲ್ಲಿ ಜೀವವಿದೆ ಎಂದು ಬೌದ್ಧಿಕವಾಗಿ, ವೈಜ್ಞಾನಿಕವಾಗಿ ಅರಿಯಲು, ಅಳತೆ ಮಾಡಲು ಕೆಲವು ಉಪಕರಣಗಳು ಸಾಕು. ಆದರೆ ಸಸ್ಯದ ಜೀವವನ್ನು ಪರಿಭಾವಿಸಲು, ಅದರ ಸುಖ-ದುಃಖ, ನೋವು-ನಲಿವುಗಳ ಅನುಭೂತಿ ಪಡೆಯಲು ಹೊಸ ರೀತಿಯ ಸಂವೇದನಶೀಲತೆಯನ್ನು ನಿರ್ಮಾಣ ಮಾಡಿಕೊಳ್ಳಬೇಕಾಗುತ್ತದೆ. ಇದೇ ವಿಜ್ಞಾನಕ್ಕೂ, ಆಧ್ಯಾತ್ಮಿಕತೆಗೂ ಇರುವ ಪ್ರಮುಖ ವ್ಯತ್ಯಾಸ.

ವಿಜ್ಞಾನವು ಒಂದು ಜೀವಂತ ವಸ್ತುವನ್ನೂ ಅಳತೆಗೆ ಒಳಪಡುವ ಶುಷ್ಕ ವಿಚಾರವಾಗಿ ಮಾರ್ಪಡಿಸುತ್ತದೆ. ಆದರೆ ಅಧ್ಯಾತ್ಮವು ಜಡ ವಸ್ತುವಿನಲ್ಲಿಯೂ ಸತ್-ಚಿತ್-ಆನಂದ ರೂಪದ ಚೈತನ್ಯದ ಅಭಿವ್ಯಕ್ತಿಯನ್ನು ಗುರುತಿಸುವಂತೆ ಮಾಡುತ್ತದೆ. ಶ್ರೀ ಶಂಕರಾಚಾರ್ಯರು ಹೇಳುತ್ತಾರೆ, ''ಒಂದು ಕಲ್ಲನ್ನು ಕಲ್ಲೆಂದು ಅರಿಯುವುದರಿಂದ ಮಾನವನಲ್ಲಿ ಯಾವುದೇ ವ್ಯತ್ಯಾಸವಾಗಲಾದರು. ಆದರೆ ಪ್ರತಿಯೊಂದು ವಸ್ತುವಿನ ಹಾಗೂ ತನ್ನ ನೈಜ ಸ್ವರೂಪವನ್ನು ಅರಿಯುವುದರಿಂದ ವ್ಯಕ್ತಿಯು ಪರಿಪೂರ್ಣನಾಗುತ್ತಾನೆ'' ಎಂದು.

ಇದೇ ವೈಜ್ಞಾನಿಕ ವಿಚಾರಧಾರೆಗೂ ಆಧ್ಯಾತ್ಮಿಕತೆಗೂ ಇರುವ ವ್ಯತ್ಯಾಸ.

**ಉಪಸಂಹಾರ**

ವಿಜ್ಞಾನದ ವಿಚಾರವಾದವು, ತರ್ಕವು ಎಷ್ಟೇ ಹರಿತವಾಗಿದ್ದರೂ ಅದು ವಸ್ತುವಿನ ನೈಜ ಸ್ವರೂಪದ ಸತ್ಯತೆಯ ಕಡೆಗೆ ನಮ್ಮನ್ನು ಕೊಂಡೊಯ್ಯಲಾರದು. ಏಕೆಂದರೆ ವಿಜ್ಞಾನವು ಇಂದ್ರಿಯ ಗ್ರಾಹ್ಯವಲ್ಲದ್ದನ್ನು ನಿರಾಕರಿಸುತ್ತದೆ. ಹೀಗಾಗಿ ಅಧ್ಯಾತ್ಮವು ವಿಜ್ಞಾನವನ್ನು ಮೀರಿಹೋಗುತ್ತದೆ. ಅಧ್ಯಾತ್ಮವು ಇನ್ನೂ ಸೂಕ್ಷ್ಮಸ್ತರದಲ್ಲಿ ಕಾರ್ಯನಿರ್ವಹಿಸುತ್ತದೆ.

ಆದರೆ, ಹಾಗೆಂದಮಾತ್ರಕ್ಕೆ ಆಧ್ಯಾತ್ಮಿಕ ಅನುಭೂತಿಯು ಅವೈಚಾರಿಕತೆಯಿಂದ ಅಥವಾ ವಿವೇಚನಾರಹಿತವಾಗಿರುತ್ತದೆ ಎಂದರ್ಥವಲ್ಲ. ಟೊಳ್ಳು ಸಿದ್ಧಾಂತಗಳನ್ನು, ಅವೈಜ್ಞಾನಿಕ ಸಂಗತಿಯನ್ನು ಆಧ್ಯಾತ್ಮಿಕತೆಯ ಹೆಸರಿನಲ್ಲಿ ಮುಂದಿಟ್ಟರೆ ನಾವದನ್ನು ಖಂಡಿತವಾಗಿ ನಿರಾಕರಿಸಬಹುದು.

ಆಧ್ಯಾತ್ಮಿಕ ಅನುಭೂತಿಯನ್ನು ವಿಚಾರದ ಘರ್ಷಣೆಗೆ ಖಂಡಿತ ಒಳಪಡಿಸಬಹುದು. ಈ ಕಾರಣದಿಂದಾಗಿಯೇ ನಮ್ಮಲ್ಲಿ ಪ್ರತಿಯೊಂದು ಆಧ್ಯಾತ್ಮಿಕ ಅನುಭೂತಿಯೂ ಕೂಡ –

೧) ತರ್ಕ ಸಮ್ಮತವಾಗಿರಬೇಕು.

೨) ಗುರುವು ಅನುಮೋದಿಸಬೇಕು.

೩) ಶಾಸ್ತ್ರವು ಅದನ್ನು ದೃಢೀಕರಿಸಬೇಕು

— ಎಂದು ಹೇಳಲಾಗಿದೆ.

ಹೀಗಾಗಿಯೇ ಭಗವದ್ಗೀತೆ-ಉಪನಿಷತ್ತುಗಳಲ್ಲಿ ಶಿಷ್ಯನು ಗುರುವಿನ ಪ್ರತಿಯೊಂದು ಮಾತನ್ನೂ ಪ್ರಶ್ನಿಸುತ್ತಾನೆ, ಅವುಗಳ ಸತ್ಯತೆಯನ್ನು ಕುರಿತಾಗಿ ಸಂಶಯವನ್ನು ವ್ಯಕ್ತಪಡಿಸುತ್ತಾನೆ, ಉಂಟಾದ ಪರಿಣಾಮಗಳನ್ನು ತರ್ಕಗಳ ಮುಂದೊಡ್ಡುತ್ತಾನೆ. ಅನುಭೂತಿಯನ್ನು ಪಡೆದ ನಂತರವೇ ಅದನ್ನು ಸತ್ಯವೆಂದು ಸ್ವೀಕರಿಸುತ್ತಾನೆ. ಆ ಅನುಭೂತಿಯ ಲಕ್ಷಣಗಳನ್ನೂ ಶಾಸ್ತ್ರವು ದೀರ್ಘವಾಗಿ ವಿವರಿಸಿದೆ.

ಹೀಗಾಗಿ ಅಧ್ಯಾತ್ಮವು ವಿಜ್ಞಾನದ ಪೂರಕ ಹಾಗೂ ಪರಿಪೂರ್ಣ ರೂಪವೇ ಹೊರತು, ಅದಕ್ಕೆ ವಿರೋಧಿಯಲ್ಲ. ✽

## ಪ್ರಿಯ ಓದುಗರೇ, ಗಮನಿಸಿ

**'ವಿವೇಕಪ್ರಭ' ಪತ್ರಿಕೆಯ ಮುದ್ರಣ ಹಾಗೂ ಕಾಗದದ ಖರ್ಚುಗಳು ದಿನದಿನಕ್ಕೆ ಹೆಚ್ಚಾಗುತ್ತಲೇ ಇವೆ. ಆದರೂ ಕಳೆದ ಹಲವಾರು ವರ್ಷಗಳಿಂದ ಚಂದಾದರವನ್ನು ಹಾಗೆಯೇ ಉಳಿಸಿಕೊಂಡು ಬಂದಿದ್ದೇವೆ. ಇದರಿಂದ ನಾವು ಅತೀವ ನಷ್ಟವನ್ನು ಅನುಭವಿಸಬೇಕಾಗಿ ಬಂದಿದೆ. ಹೀಗಾಗಿ ಬಿಡಿಪ್ರತಿಯ ಬೆಲೆ ಹಾಗೂ ಚಂದಾ ದರಗಳನ್ನು ಜೂನ್ ತಿಂಗಳ ಸಂಚಿಕೆಯಿಂದ ಈ ಕೆಳಗಿನಂತೆ ಅನಿವಾರ್ಯವಾಗಿ ಹೆಚ್ಚಿಸಲೇಬೇಕಾಗಿದೆ. ನಮ್ಮ ಓದುಗರು ಈ ವಿಚಾರದಲ್ಲಿ ನಮ್ಮೊಡನೆ ಸಹಕರಿಸಬೇಕಾಗಿ ಕೋರಿಕೊಳ್ಳುತ್ತೇವೆ. ಸದ್ಯದ ಚಂದಾದಾರರು ಹಳೆಯ ದರದಲ್ಲಿಯೇ ಪ್ರತಿಗಳನ್ನು ಪಡೆದುಕೊಳ್ಳುತ್ತಾರೆ. ನವೀಕರಣದ ಸಮಯದಲ್ಲಿ ಮಾತ್ರ ಹೊಸ ದರ ಅನ್ವಯವಾಗುತ್ತದೆ.**

ಹೊಸ ಚಂದಾ ಅವಧಿ : **ಐದು ವರ್ಷದ ಚಂದಾ ಅವಧಿಯನ್ನು** ಈ ಸಂಚಿಕೆಯಿಂದ ಆರಂಭಿಸಲಾಗಿದೆ.

**1) ಬಿಡಿ ಪ್ರತಿ : ರೂ. 18/- ;**
**2) ವಾರ್ಷಿಕ ಚಂದಾ : ರೂ. 200/-;**
**3) ಮೂರು ವರ್ಷದ ಚಂದಾ : ರೂ. 500/-;**
**4) ಐದು ವರ್ಷದ ಚಂದಾ : ರೂ. 800/-**
**5) ಆಜೀವ ಚಂದಾ (25 ವರ್ಷಗಳಿಗೆ ಮಾತ್ರ) : ರೂ. 4000/;**
**6) ಪೋಷಕ ಸಹಾಯಧನ (25 ವರ್ಷಗಳಿಗೆ ಮಾತ್ರ) : ರೂ. 7,000/- ಅಥವಾ ಹೆಚ್ಚು**

ವ್ಯವಸ್ಥಾಪಕ ಸಂಪಾದಕರು